835

ಸೂಲದಪಟ್ಟಿ.

ನಂಬರು	ಲೇಪೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹೂಲೀ ತಿಳಿಯಬಂದ ಅವರುಗಳೆ ವಾಸಸ್ಥಳ	ಸೊಬಲಗೆ	ಸೊವಾಗ ಬೇಕಾಗೆ ಬಾಕಿ ಪಡಬೇಕಾದ	ದೇಸೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದೂ ಇದ್ದರೆ	ಷರಾ.
1	ಮದ್ದಗಿರಿರತಕ್ಕ ತಿಪ್ಪಾಪುರ ಸುಬ್ಬಯ್ಯ ..	86 12 0	..	ಮದ್ದಗಿರಿಮುನಿಫ಼ ಕೋರ್ಟು 1887 ಆ| 346ನೇ ಡಿ| ಮೊ|	
2	ಡಿಟೋ ಪೆದ್ದಕೆಟ್ಟ ರಾಮಂಣ ..	17 0 0 3 0 0	..	ವಂದೂವರೆ ವರುಷಕ್ಕೆ ಮುಂಚೆ ಬರಕೊಟ್ಟಛಾಪಾಕಾಗದ ಪತ್ರದ ಬಾಬತು—ಜವಳಿ ಬಾಬತು ಸಹ	
3	ಡಿಟೋ ರಿಕಾರ್ಡ್‌ಕೀಪರ್ ವೆಂಕಟಸುಬ್ಬಯ್ಯ ..	15 0 0	..	ಛಾಪಾಕಾಗದ ಪತ್ರದ ಬಾಬತು	
4	ಡಿಟೋ ಜವಳಿ ಗವುರಪ್ಪನವರಿಗೆ ..	5 0 0	..	ಜವಳಿ ಬಾಬತು	
	ಜುಮ್ಲಾ	126 12 0			

ಎಲ್. ಆನಂತಸ್ವಾಮಿರಾವ್,
ಸಬ್ ಜಡ್ಜ.

ಕ್ಕೋಲಾರದ ಡಿಸ್ಟ್ರಿಕ್ಟ.

ಇಸ್ತಿಹಾರ್‌ನಾಮೆ.

ನಂ. 2144–5–1253.–ಕೋಲಾರದ ಟ್ರೆಜರಿ ಆಫಿಸರ್‌ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಮೆ|| ಹೆಚ್. ರಾಮಾನುಜಯ್ಯಂ ಗಾರು 1882ನೇ ಇಸವಿ Xನೇ ಆಕ್ಟಿನ 4ನೇ ಷೆಡ್ಯೂಲ್ ಮೇರಿಗೆ ಇದರಡಿ ನಮೂದಾಗುವ ಜಾಸ್ತಿ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(4) ಫಿರ್ಯಾದ ಮೇಲೆ ತಕ್ಕೀರ್‌ಗಳನ್ನ ವಿಚಾರಣೆಗೆ ತೆಗದುಕೊಳ್ಳೋಣ ನೆಕರ್ಷ (191).

(5) ಪೊಲೀಸ್ ರಿಪೋರ್ಟಿನ ಮೇಲೆ ತಕ್ಕೀರುಗಳನ್ನ ವಿಚಾರಣೆಗೆ ತೆಗದುಕೊಳ್ಳೋಣ (ನೆಕರ್ಷ 191).

ಅಬ್ದುಲ್‌ರಹಮಾನ್,
ಡಿಸ್ಟ್ರಿಕ್ಟ ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟ.

ಮೈಸೂರು ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ 249.

ಮೃತಪಟ್ಟ ಮಲ್ಲಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಎಸಪ್ಪ ಮೈನರ್, ಗಾರ್ಡಿಯ್ ಅಜ್ಜಿ ಪುಟ್ಟಮ್ಮನು ಮೃತಪಟ್ಟ ಸದರೀ ಮಲ್ಲಣ್ಣನವರಿಗೆ ಮೈನರ್ ಮಗ ಆಗ ಬೇಕೆಂಬ ಹಕ್ಕುದಾರಿ ಮೇಲೆ ನಜಿನೆಗೂಗು ತಾ|| ಇಬ್ಬುಜಾಲ್ ಗ್ರಾಮ ಸ್ಥಳದ ಸದರೀ ಪುಟ್ಟಮ್ಮನವರು ಸದರೀ ವಾಸಸ್ಥನಾಗಿ ಮೃತಪಟ್ಟಮಲ್ಲಣ್ಣನವರ ಜೆಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿನಂಕ್ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಣ್ಣನವರ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ 252.

ಮೃತಪಟ್ಟ ಚೆಂದಗಾಲ್ ಸುಬ್ಬಾಚಾರ್ಯ ಆಸ್ತೀವಿಷಯದಲ್ಲಿ—

ಅರ್ಜೀದಾರು ಕೇಪಗಿರಿ ಆಚಾರ್ಯು, ಮೃತಪಟ್ಟ ಸದರೀ ಸುಬ್ಬಾಚಾರ್ಯರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇಸ್ಥಳದ ಸದರೀ ಕೇಪಗಿರಿ ಆಚಾರ್ಯು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಚಾರ್ಯ ಜೆಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೇಪಗಿರಿ ಆಚಾರ್ರ ಅರ್ಜಿಯನ್ನು 1889ನೇ ಇಸವಿ ನವಂಬರ್ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1889ನೇ ಇಸವಿ ಅರ್ಜೀ ನಂಬರ್ 253.

ಮೃತಪಟ್ಟ ನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನಂಜಪ್ಪನವರು, ಮೃತಪಟ್ಟ ಸದರೀ ನಾರಣಪ್ಪನವರಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರಿ ಮೇಲೆ ಅರಜೀಕೆರೆ ತಾ|| ತೊಂಡವಾಗಲು ಸ್ಥಳದ ಸದರೀ ನಂಜಪ್ಪನವರು ಸದರೀ ವಾಸನ್ಥರಾಗಿ ಮೃತಪಟ್ಟ ನಾರಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂ. ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪನವರ ಅರ್ಜಿಯನ್ನು 1889ನೇ ಇಸವಿ ನವಂಬರ್ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಷಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಅಕ್ಟೋಬರ್ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಪೊಲೀಸ್ ಇಲಾಖೆ.

ನೋಟೀಸ್.

ತಾರೀಖು 3ನೇ ಮಾಹೆ ನವಂಬರ್ 1889ನೇ ಇಸವಿ.

ಸ್ಯ 1889ನೇ ಇಸವಿ ಅಕ್ಟೋಬರ್ ತಾರೀಖು 10ನೇ ರಾತ್ರೆ ಮೈಸೂರ್ ಸೆಂಟ್ರಲ್ ಜೈಲ್‌ನಿಂದ ಫರಾರಿಯಾದ ಅಂಡರ್ ಟ್ರೈಲ್ ಖೈದಿಗಳು 1 ಕಾಳೇಕೊರವರ್—2 ಮುನಿಯ ಕೊರವರ್ ಯಂಬುವರುಗಳನ್ನ ದಸ್ತಗಿರಿ ಮಾಡುವದಕ್ಕೆ ತಕ್ಕ ವರ್ತಮಾನ ಕೊಟವರಿಗೆ (50) ರೂಪಾಯಿಗಳು ಇನಾಂ ಕೊಡುವದರಲ್ಲಿ ಬರುತ್ತೆ.

ಅವರಗಳ ಚಹರೆಪಟ್ಟಿ ಯಿದಕ್ಕೆ ಜಂಟಿಸಿ ಯಿಧೆ.

ಮೈಸೂರು ಸೆಂಟ್ರಲ್ ಜೈಲ್‌ನಿಂದ ಸ್ಯ 1889ನೇ ಇಸವಿ ಅಕ್ಟೋಬರ್ 10ನೇ ತಾರೀಖಿನ ರಾತ್ರೆ ಫರಾರಿಯಾದ ಅಂಡರ್ ಟ್ರೈಲ್ ಖೈದಿಗಳ ಚಹರೆ ಪಟ್ಟಿ.

ಖೈದಿ ಹೆಸರು ಮತ್ತು ತಂದೆ ಹೆಸರು	ತಕ್ಕೀರ್	ವಯಸ್ಸು ಮತ್ತು ಮುಖ್ಯವಾದ ಗುರ್ತುಗಳು	ಜಾತಿ ಮತ್ತು ಕಸಬು	ವಾಸಸ್ಥಳ	ಫರಾರಿ ಆದ ತಾರೀಖು	ಷರಾ
1 ಕಾಳಿಕೊರವರ್ ತಂದೆ ಕರಪ ಕೊರವರ್	ಇಂಡಿಯರ್ ಪೆನಲ್‌ಕೋಡ್ 302 ಮತ್ತು 392ನೇ ಸೆಕ್ಷನಿನಲ್ಲಿ ಕಂಡ ಖೂನಿ ಮತ್ತು ರ್ಯಾಬರಿ	ಸುಮಾರು 20 ವರುಷ ಕಪ್ಪುವರ್ಣ	ಕೊರವರ್ ಕೂಲಿ	ಸತ್ಯಮಂಗಲ ತಾಲ್ಲೂಕು ಮತ್ತೂರು ಪರಿಕೋಡಿವಾಲ ಗ್ರಾಮ	10ನೇ ಅಕ್ಟೋಬರ್ 1889ನೇ ಇಸವಿ	ಇವರು ಸತ್ಯಮಂಗಲ ತಾಲ್ಲೂಕು ಪೊಲೀಸಿನವರ ಮೂಲಕ ದಸ್ತಗಿರಿ ಆಗಲ್ಪಟ್ಟು ಮೈಸೂರು ಟವನಿಗೆ ಸುಮಾರು 2 ತಿಂಗಳ ಕೆಳಗೆ ತರಲ್ಪಟ್ಟು ಸೆಷನ್ ಸೆಟ್ರೈಲ್ ಬಗ್ಯೆ ಮಾಜಿಸ್ಟ್ರೇಟರಿಂದ ಕಮಿಟ್ ಆಗಿಯಿದ್ದರು
2 ಮುನಿಯ ಕೊರವರ್ ತಂದೆ ಅಂಗಾ ಕೊರವರ್	ಡಿಟೋ	ಸುಮಾರು 25 ವರುಷ	ಡಿಟೋ	ಸದರಿ ತಾಲ್ಲೂಕು ಕೊಪ್ಪವಾಲ್ಯಂ ಅಲಕಲ್ಲಿ ಗ್ರಾಮ	ಡಿಟೋ	

ಟಿ. ಆನಂದರಾವ್,
ಪೊಲೀಸ್ ಕಮಿಷನರ್.